ಹಂಗ್ಮಾಡ್ತೀವಿ, ಹಿಂಗ್ ಮಾಡ್ತೀವಿ ಅಂತ ನಮ್ಮನ್ನೆಲ್ಲಾ ಶತಾಬ್ದಿ ರೈಲು ಹತ್ತಿಸಿ ಮಂಗ ಮಾಡಿ ಕಿವಿ ಮೇಲೆ ಕೆಂಪು ದಾಸವಾಳದ ಹೂವಿಟ್ಟು ಅಲಂಕಾರ ಮಾಡಿ ರಸ್ತೆಗಳ್ನ ಈ ಕಂಡೀಸನ್ನಾಗೆ ಮಡಿಗ್ಯವ್ರಲ್ಲ, ಕ್ವಾಪ ಬತ್ತದಾ ಇಲ್ವಾ?'

'ಕ್ವಾಪ ಬತ್ತದೆ ಕಣ್ಲಾ, ಹಾಗಂತ ಉಗೀಬ್ಯಾಡ್ದು.'

'ಯಾಕ್ಲಾ ಉಗೀ ಬ್ಯಾಡ್ದು? ಇನ್ನೇನು ಈ ಮಕ್ಳಿಗೆ ತುಂಬೆ ಹೂತಂದು ಪೂಜೆ ಮಾಡಾಕಾಯ್ತದಾ?'

'ಹಂಗಲ್ಲಾ ಕಣ್ಲಾ ತಿಪ್ಪೇಸೀ...'

'ಇನ್ ಹ್ಯಾಂಗ್ಲಾ? ಉಗಿದ್ರೆ ಏನಾಯ್ತದೆ?'

'ಉಗಿದ್ರೆ ನಿನ್ನ ಉಗುಳೇ ವೇಸ್ಟಾಯ್ತದೆ ಅಟ್ಟೇಯ.'

'ಈ ನನ್ಮಕ್ಳಿಗೆ ಉಗುಳು ಯಾಕೆ ವೇಸ್ಟ್ ಮಾಡ್ಬೇಕು ಅಂತೀಯಾ?'

ಹೀಗೆ ನಮ್ಮಿಬ್ಬರ ನಡುವೆ ಸಂಭಾಷಣೆ ನಡೆಯುತ್ತಿರಬೇಕಾದರೆ ನಮ್ಮ ಹಾಗೆಯೇ ಹೊಂಡಗಳನ್ನು ತಪ್ಪಿಸಿಕೊಳ್ಳಲು ಹರ ಸಾಹಸ ಮಾಡುತ್ತಾ ಬಹಳ ಚಾಕಚಕ್ಯತೆಯಿಂದ ಸ್ಕೂಟರಿನಲ್ಲಿ ಹಾವಿನ ಹಾಗೆ ಎದುರುಗಡೆಯಿಂದ ಬರುತ್ತಿದ್ದವನೊಬ್ಬ ನಮ್ಮ ಸ್ಕೂಟರಿನ ಮುಂದಿನ ಚಕ್ರಕ್ಕೆ ಮೃದುವಾಗಿ ತನ್ನ ಸ್ಕೂಟರಿನ ಚಕ್ರದಿಂದ ಮುತ್ತಿಕ್ಕಿಸಿದ! ಈ ಹೊಂಡಗಳನ್ನು ತಪ್ಪಿಸಿಕೊಂಡು ಸಂಚರಿಸುವ ವಾಹನ ಸವಾರರು ಅತ್ಯಂತ ಕಡಿಮೆ ವೇಗದಲ್ಲಿರುವುದರಿಂದ ಅಂತಹ ಅಪಾಯವಿರುವುದಿಲ್ಲ. ಅಥವಾ ಏನಾದರೂ ಹೆಚ್ಚೂ ಕಡಿಮೆಯಾದರೂ ಅಪಾಯದ ತೀವ್ರತೆ ಅತ್ಯಂತ ನಗಣ್ಯವಾಗಿರುತ್ತದೆ.

'ಏನ್ಲಾ, ಕಣ್ ಕಾಣ್ಸಾಕಿಲ್ವಾ? ಬಂದು ನನ್ನ ಸ್ಕೂಟರಿಗೆ ಡಿಚ್ಚಿ ಕೊಡ್ತೀಯಲ್ಲ!'

ಅಂತ – ಮೊದಲೇ ರಸ್ತೆ ಹೊಂಡಗಳ ಮೇಲೆ ಕೆಂಡ ಕಾರುತ್ತಿದ್ದ ತಿಪ್ಪೇಶಿ ಅಬ್ಬರಿಸಿದಾಗ ಎದುರಾಳಿ ತಣ್ಣಗೆ, 'ಸದ್ಯ, ಏನೂ ಆಗಿಲ್ವಲ್ಲ, ಅದಕ್ಕೆ ಸಂತೋಷಪಡಿ. ರಸ್ತೆ ಹೊಂಡಗಳಿಗೆ ಥ್ಯಾಂಕ್ಸ್ ಹೇಳಿ' ಅಂತಂದು, ಹೊಂಡ ತಪ್ಪಿಸಿಕೊಳ್ಳುವ ಸರ್ಕಸ್ ಮಾಡುತ್ತಾ ಮುಂದಕ್ಕೆ ಹೊರಟೇ ಹೋದ! ಅವನ ನಡೆಯನ್ನು ನೋಡಿ ತಿಪ್ಪೇಶಿಗೆ ಉರಿದುಹೋಯಿತು.

'ನೋಡಿದ್ಯಾ ಆ ನನ್ಮಗನ್ ಧಿಮಾಕು? ನನ್ನ ಸ್ಕೂಟರಿಗೆ ತನ್ನ ಸ್ಕೂಟರು ತಾಗಿಸಿದ್ದಲ್ಲದೆ ಹೊಂಡಗಳಿಗೆ ಥ್ಯಾಂಕ್ಸ್ ಹೇಳಿ ಅಂತ ಉಪದೇಸ ಬ್ಯಾರೆ ಮಾಡಿ ಹೋಯ್ತವ್ನೆ. ಇವ್ನಿಗೆ ಯಾವುದ್ರಾಗೆ ಇಕ್ಕಬೇಕು?'

'ಹೋಗ್ಲಿ ಬುಡು ತಿಪ್ಪೇಸಿ. ಸದ್ಯ ಏನೂ ಅಪಾಯ ಆಗ್ನಿಲ್ವಲ್ಲಾ. ಅಂದಹಾಗೆ ತಿಪ್ಪೇಸೀ, ಅಪಾಯ ಆಗ್ದೆ ಇರೂಕೆ ಕಾರಣ ನಮ್ಮ ಮತ್ತು ಅವ್ನ ಸ್ಕೂಟ್ರುಗಳು ಸ್ಲೋ ಮೋಸನ್‌ನಲ್ಲಿ ಹೋಯ್ತಾ ಇದ್ದುದು ಅಲ್ವಾ?'

'ಹೌದಯ. ಸ್ಲೋ ಮೋಸನ್ನಲ್ಲಿ ಯಾಕೆ ಹೋಯ್ತಾ ಇದ್ವು ನಮ್ಮ ಸ್ಕೂಟ್ರುಗಳು ಹೇಳು?'

'ಅಷ್ಟೂ ಗೊತ್ತಾಗಕಿಲ್ವಾ ತಿಪ್ಪೇಸೀ? ಈಪಾಟಿ ಹೊಂಡ–ಹಂಪುಗಳಿರೋ ರಸ್ತೇಲಿ ಯಾವ ಮುಟ್ಠಾಳ ನನ್ಮಗ ಪಾಸ್ಟಾಗಿ ಹೋಯ್ತಾನೆ ಹೇಳು?'

'ಅಲ್ವಾ ಮಂತೆ? ರಸ್ತೆಗಳು ಚೆನ್ನಾಗಿದ್ರೆ ಜನ ಪಾಸ್ಟಾಗಿ ಹೋಯ್ತಾರೆ, ಆಕ್ಸಿಡೆಂಟ್ ಮಾಡ್ಕತಾರೆ. ಅದ್ಕೇ ಇರಬೇಕು ಸರ್ಕಾರ ರಸ್ತೆಗಳ್ನ ಈ ಕಂಡೀಸನ್ನಲ್ಲೇ ಮಡಿಗ್ಯವ್ರೆ. ಈಗ ನೋಡು, ನಾವು ಸ್ಕೂಟ್ರಾಗೇ ಹೋಯ್ತಾ ಇದ್ರೂ ಪುಟ್‌ಪಾತ್ ಮೇಲೆ ನೆಡ್ಕಂಡು ಹೋಯ್ತಾ ಇರೂ ಜನಾನ ಹಿಂದಿಕ್ಕೂರೆ ಆಯ್ತಾ ಇಲ್ಲ! ಅಷ್ಟು ಸ್ಲೋ ಮೋಸನ್ನು ನಮ್ದು!'